



# ಇತಿಹಾಸದ ಜಾಡು ಹುಡುಕುತ್ತ..

ಶ್ರೀರಂಗಪಟ್ಟಣದ ಇತಿಹಾಸದ ಕುರುಹುಗಳು ಒಂದೊಂದಾಗಿ ಕಣ್ಮರೆಯಾಗುತ್ತಿವೆ. ಸಂರಕ್ಷಣೆ ಮಾಡಿರುವುದಷ್ಟೇ ಅಲ್ಲ, ಪಾಳು ಬಿದ್ದಿರುವ ಹಲವು ಕಟ್ಟಡಗಳೂ ಇಲ್ಲಿನ ಗತ ಇತಿಹಾಸದ ಮೇಲೆ ಬೆಳಕು ಚೆಲ್ಲುತ್ತವೆ.

ಚಿತ್ರ– ಲೇಖನ: **ಗಣಂಗೂರು ನಂಜೇಗೌಡ**



ಶ್ರೀರಂಗಪಟ್ಟಣದ ಕಾವೇರಿ ಸಂಗಮ ರಸ್ತೆಯಲ್ಲಿರುವ ಬ್ರಿಟಿಷ್ ಸೇನಾನಿ ಕರ್ನಲ್ ವಿಲಿಯಂ ಬೇಯ್ಲಿ ಅವರ ಸ್ಮಾರಕ (ಸೆನಟೋಪ್).

‘ಭಾನುವಾರ ಸ್ಮಾರಕಗಳನ್ನು ಹುಡುಕಿಕೊಂಡು ಹೊರಟಿದ್ದೇವೆ. ಬಿಡುವಿದ್ದರೆ ನಮ್ಮೊಡನೆ ಬನ್ನಿ’– ಕ್ಯಾತನಹಳ್ಳಿಯ ಡಾ.ಕೆ.ವೈ. ಶ್ರೀನಿವಾಸ್ ಹೀಗೊಂದು ಆಹ್ವಾನ ಕೊಟ್ಟಾಗ ಒಪ್ಪಿ ತಂಡದ ಜೊತೆ ಸೇರಿಕೊಂಡೆ. ಹೊರಟಿದ್ದು ಟಿಪ್ಪು ಕಾಲದ ಇತಿಹಾಸಕ್ಕೆ ಹೊಸ ಪ್ರವೇಶ ಪಡೆಯಲು..

ನಮ್ಮ ತಂಡ ಟಿಪ್ಪು ಆಡಳಿತದಲ್ಲಿ ಪ್ರಮುಖ ಜನವಸತಿ ಕೇಂದ್ರ ಮತ್ತು ವ್ಯಾಪಾರ ಕೇಂದ್ರವೂ ಆಗಿದ್ದ ಶಹರ್ ಗಂಜಾಂ ಪ್ರವೇಶಿಸಿತು. ಪುರಸಭೆ ಮಾಜಿ ಅಧ್ಯಕ್ಷೆ ಶೀಲಾ ನಂಜುಂಡಯ್ಯ ಅವರ ಮನೆಯಲ್ಲಿ ಅಕ್ಕಿರೊಟ್ಟಿ ಜತೆಗೆ ಚಿಕನ್ ತಿಂದ ನಂತರ ನಮ್ಮ ಪಯಣ ಶುರುವಾಯಿತು. 85ರ ಇಳಿ ವಯಸ್ಸಿನ ಸಾಹಿತಿ ಪ್ರೊ. ಎಂ. ಕರೀಮುದ್ದೀನ್ ಯುವಕರು ನಾಚುವಂತೆ ಹುರುಪಿನಿಂದ ತಂಡವನ್ನು ಮುನ್ನಡೆಸಿದರು. ಬೆಂಗಳೂರು ಬಿಜಿಎಸ್ ಆಸ್ಪತ್ರೆಯ ಸಹಾಯಕ ಪ್ರಾಧ್ಯಾಪಕ ಡಾ.ಕೃಷ್ಣ, ಕವಿ ಚಂದ್ರಶೇಖರಯ್ಯ ಕುಂತಿಬೆಟ್ಟ, ಡಾ.ಕೆ.ವೈ. ಶ್ರೀನಿವಾಸ್, ಪಾಂಡವಪುರ ಗ್ರಾಮರಂಗ ತಂಡದ ಧನ್ಯಕುಮಾರ್, ಇತಿಹಾಸಾಸಕ್ತ ಕಡತನಾಳು ಜಯಶಂಕರ್ ಅವರೊಡನೆ ನಾನೂ ಪ್ರೊ.ಕರೀಮುದ್ದೀನ್ ಅವರನ್ನು ಹಿಂಬಾಲಿಸಿದೆ.